# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 2327 |
| ಮಾನ್ಯ ಸದಸ್ಯರ ಹೆಸರು | : ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 21.03.2022 |
| ಉತ್ತರಿಸುವ ಸಚಿವರು | : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವಾ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು ರೂಪಿಸಿರುವ ಯೋಜನೆಗಳು ಯಾವುವು (ಸಂಪೂರ್ಣ ಮಾಹಿತಿ ನೀಡುವುದು)</td><td>ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವಾ ಸೌಲಭ್ಯಗಳನ್ನು ಒದಗಿಸಲು [illegible] ಹಂತದಲ್ಲಿ ಯೋಜನೆಗಳನ್ನು/ ಕಾರ್ಯಕ್ರಮಗಳನ್ನು ಹಾಗೂ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ನಿಂದ ಅನುಷ್ಠಾನಗೊಳಿಸಲಾಗುತ್ತಿರುವ ಆರೋಗ್ಯ ಯೋಜನೆಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.</td></tr>
<tr><td>ಆ</td><td>ಆರೋಗ್ಯ ಮೂಲ ಸೌಕರ್ಯಗಳನ್ನು ಸ್ಥಾಪಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;</td><td>ಕೋವಿಡ್-19ರ ಸಮರ್ಪಕ ನಿರ್ವಹಣೆಗಾಗಿ ಹಾಗೂ ಇತರೆ ಆರೋಗ್ಯ ಸೇವೆಗಳನ್ನು ನೀಡುವ ಉದ್ದೇಶದಿಂದ ಕೈಗೊಂಡಿರುವ ಮೂಲಭೂತ ಸೌಕರ್ಯ ಕಾಮಗಾರಿ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.</td></tr>
<tr><td>ಇ</td><td>ಸರ್ಕಾರವು ಅಂಗಾಂಗ ಕಸಿ ಯೋಜನೆಯನ್ನು ಜಾರಿಗೆ ತಂದಿದೆಯೇ; ಹಾಗಿದ್ದಲ್ಲಿ, ಚಿಕಿತ್ಸೆಯ ಫಲಾನುಭವಿಗಳೆಷ್ಟು ಮತ್ತು ರಾಜ್ಯದ ಯಾವ ಆಸ್ಪತ್ರೆಗಳು ಅಂಗಾಂಗ ಕಸಿ ಮಾಡುವ ಸೌಲಭ್ಯಗಳನ್ನು ಹೊಂದಿದೆ?</td><td>ಅಂಗಾಂಗ ಕಸಿ ಯೋಜನೆಯನ್ನು ದಿನಾಂಕ:03.12.2018ರಲ್ಲಿ ಜಾರಿಗೆ ತಂದಿದೆ. ಈ ಯೋಜನೆಯಡಿ ಬಿ.ಪಿ.ಎಲ್ ಫಲಾನುಭವಿಗಳಿಗೆ ಹೃದಯ ಕಸಿ, ಕಿಡ್ನಿ ಕಸಿ ಮತ್ತು ಲಿವರ್ ಅಂಗಾಂಗ ಕಸಿ ಚಿಕಿತ್ಸೆಯನ್ನು ಉಚಿತವಾಗಿ ಒದಗಿಸಲಾಗುತ್ತಿದೆ.<br><br>ಈ ಯೋಜನೆಯಡಿ 11 ಖಾಸಗಿ ಆಸ್ಪತ್ರೆಗಳು ಹಾಗೂ 02 ಸರ್ಕಾರಿ ಆಸ್ಪತ್ರೆಗಳನ್ನು ನೋಂದಾಯಿಸಲಾಗಿದೆ. ವಿವರವನ್ನು ಅನುಬಂಧ-3 ನೀಡಲಾಗಿದೆ.<br><br>ದಿನಾಂಕ:03.12.2018ರಿಂದ ಯೋಜನೆಯಡಿ ಈ ಕೆಳಗಿನಂತೆ ಫಲಾನುಭವಿಗಳಿಗೆ ಚಿಕಿತ್ಸೆ ಒದಗಿಸಲಾಗಿದೆ.<br><br><table><tr><th>ಅಂಗಾಂಗ ಕಸಿ</th><th>ಫಲಾನುಭವಿಗಳು</th></tr><tr><td>ಕಿಡ್ನಿ ಅಂಗಾಂಗ ಕಸಿ</td><td>44</td></tr><tr><td>ಹೃದಯ ಅಂಗಾಂಗ ಕಸಿ</td><td>11</td></tr><tr><td>ಲಿವರ್ ಅಂಗಾಂಗ ಕಸಿ</td><td>5</td></tr></table><br>ಜೀವನ ಪರ್ಯಂತ ಒಂದು ವರ್ಷಕ್ಕೆ 10 Immunosuppression ಔಷಧಿ ನೀಡಲಾಗುತ್ತಿದೆ.</td></tr>
</table>

ಆಕುಕ 82 ಎಸ್‌ಬಿವಿ 2022

(ಡಾ॥ ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

Scanned with CamScanner

## ಪ್ರಶ್ನೆ ಸಂಖ್ಯೆ:-2327 ಕ್ಕೆ ಅನುಬಂಧ-1

- **ಪ್ರಾಥಮಿಕ ಹಂತದ ಆರೋಗ್ಯ ಸೇವೆಗಳು;-**

  ಈ ಕೆಳಕಂಡ ಪ್ರಾಥಮಿಕ ಹಂತದ ಆರೋಗ್ಯ ಸೇವೆಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನೀಡಲಾಗುವುದು.

  - ತುರ್ತು ಆರೋಗ್ಯ ಸೇವೆಗಳು, ಹೊರರೋಗಿ ಮತ್ತು ಒಳರೋಗಿ ಚಿಕಿತ್ಸಾ ಸೇವೆಗಳು.
  - ಗರ್ಭಿಣಿ, ಹೆರಿಗೆ (24/7 ಪ್ರಾ.ಆ.ಕೇಂದ್ರಗಳಲ್ಲಿ ಮಾತ್ರ) ಮತ್ತು ಬಾಣಂತಿಯರ ಆರೈಕೆ.
  - ನವಜಾತ ಶಿಶುವಿನ ಆರೈಕೆ.
  - ಸಾಂಕ್ರಾಮಿಕ ಹಾಗೂ ಅಸಾಂಕ್ರಾಮಿಕ ರೋಗಗಳ ತಡೆಗಟ್ಟುವ ಯೋಜನೆಗಳು.
  - ಲಸಿಕಾ ಕಾರ್ಯಕ್ರಮಗಳು.
  - ಕುಟುಂಬ ಕಲ್ಯಾಣ ಯೋಜನೆಗಳ ಸೇವೆಗಳು.
  - ಪ್ರಯೋಗಶಾಲಾ ಪರೀಕ್ಷೆಗಳು, ಆರೋಗ್ಯ ಶಿಕ್ಷಣ/ಸಲಹೆ, ರೆಫರಲ್ ಸೇವೆಗಳು. ಇದಲ್ಲದೆ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನವಾಗುತ್ತದೆ.
  - ಜೆ.ಎಸ್.ವೈ, ಜೆ.ಎಸ್.ಎಸ್.ಕೆ., ಟೆಲಿಮೆಡಿಸಿನ್, ಆರೋಗ್ಯ ನಂದನ ಕಾರ್ಯಕ್ರಮ, ಆರ್.ಬಿ.ಎಸ್.ಕೆ ತಂಡದಿಂದ ಅಂಗನವಾಡಿ ಮತ್ತು ಶಾಲಾಮಕ್ಕಳ ಆರೋಗ್ಯ ತಪಾಸಣೆ, ಶುಚಿ ಕಾರ್ಯಕ್ರಮ.
  - ಆರೋಗ್ಯ ಸಮಾಲೋಚನೆ.

- **ದ್ವಿತೀಯ ಹಂತದಆರೋಗ್ಯ ಸೇವೆಗಳು;-**

  ಈ ಕೆಳಕಂಡ ದ್ವಿತೀಯ ಹಂತದ ಆರೋಗ್ಯ ಸೇವೆಗಳನ್ನು ಸಮುದಾಯ ಆರೋಗ್ಯ ಕೇಂದ್ರ ಹಾಗೂ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ನೀಡಲಾಗುವುದು.

  - ತಾಲ್ಲೂಕು ಆಸ್ಪತ್ರೆಯು ಮೊದಲನೇ ಹಂತದ ರೆಫರಲ್ ಘಟಕವಾಗಿ ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿ ತಜ್ಞ ವೈದ್ಯರಿಂದ ಹೊರರೋಗಿಗಳ ತಪಾಸಣೆ ಹಾಗೂ ಚಿಕಿತ್ಸೆ, ಸಾಮಾನ್ಯ ರೋಗಗಳಿಗೆ ಒಳರೋಗಿ ಚಿಕಿತ್ಸೆ, ಹೆರಿಗೆ ಸೌಲಭ್ಯ, ಶಸ್ತ್ರಚಿಕಿತ್ಸೆಗಳು, ಲಸಿಕಾ ಕಾರ್ಯಕ್ರಮ, ಕುಟುಂಬ ಕಲ್ಯಾಣ ಯೋಜನೆ, ಪ್ರಯೋಗಶಾಲಾ ಪರೀಕ್ಷೆಗಳು, ಡಯಾಲಿಸಿಸ್ ಸೇವೆ, ತುರ್ತು ನಿಗಾ ಘಟಕ (ಐಸಿಯು), ಆರೋಗ್ಯ ಶಿಕ್ಷಣ/ಸಲಹೆ, ರೆಫರಲ್ ಸೇವೆಗಳು. ಇದಲ್ಲದೆ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನವಾಗುತ್ತದೆ.
  - ರೋಗ ಪೀಡಿತ ನವಜಾತ ಶಿಶುವಿನ ಆರೈಕೆಗಾಗಿ ಎಸ್.ಎನ್.ಸಿ.ಯು ಸೌಲಭ್ಯ ಹಾಗೂ ತೀವ್ರತರದ ಅಪೌಷ್ಠಿಕತೆ ಹೊಂದಿರುವ ಮಕ್ಕಳಿಗೆ ಎನ್.ಆರ್.ಸಿ ಸೌಲಭ್ಯಗಳು.
  - ಸುವರ್ಣ ಆರೋಗ್ಯ ಸುರಕ್ಷ ಟ್ರಸ್ಟ್ ವತಿಯಿಂದ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿಯಲ್ಲಿ ಸರ್ಕಾರಿ ಹಾಗೂ ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸಾ ಸೇವೆಗಳು.

Rp

> **ತೃತೀಯ ಹಂತದಆರೋಗ್ಯ ಸೇವೆಗಳು:-**

ಈ ಕೆಳಕಂಡ ತೃತೀಯ ಹಂತದ ಆರೋಗ್ಯ ಸೇವೆಗಳನ್ನು ಜಿಲ್ಲಾ ಆಸ್ಪತ್ರೆಗಳಲ್ಲಿ ನೀಡಲಾಗುವುದು.

- ಜಿಲ್ಲಾ ಆಸ್ಪತ್ರೆಯಲ್ಲಿ ಹೊರರೋಗಿಗಳ ತಪಾಸಣೆ ಹಾಗೂ ಚಿಕಿತ್ಸೆ, ಒಳರೋಗಿ ಚಿಕಿತ್ಸೆ, ಶಸ್ತ್ರಚಿಕಿತ್ಸೆ, ಹೆರಿಗೆ ಹಾಗೂ ಪ್ರಯೋಗಶಾಲಾ ಪರೀಕ್ಷೆಗಳು, ಆರೋಗ್ಯ ಶಿಕ್ಷಣ/ಸಲಹೆ, ಟೆಲಿ ಐಸಿಯು, ಟೆಲಿ ಕನ್ಸಲ್ಟೇಷನ್ ಸೇವೆಗಳು, ರೆಫರಲ್ ಸೇವೆಗಳು, ದಂತ ವೈದ್ಯಕೀಯ ಸೌಲಭ್ಯಗಳು, ಪ್ರಯೋಗಾಲಯ ಸೌಲಭ್ಯ, ಡಯಾಲಿಸಿಸ್ ಸೇವೆ, ಎಕ್ಸರೇ, ಇಸಿಜಿ, ಸಿ.ಟಿ.ಸ್ಕ್ಯಾನ್, ಎಂ.ಆರ್.ಐ ಸ್ಕ್ಯಾನ್, ಆಂಬುಲೆನ್ಸ್ ಸೌಲಭ್ಯ, ಲಸಿಕಾ ಕಾರ್ಯಕ್ರಮ, ಕುಟುಂಬ ಕಲ್ಯಾಣ ಯೋಜನೆ, ಹಾಗೂ ಎನ್.ಸಿ.ಡಿ. ಕ್ಲಿನಿಕ್ ಮತ್ತು ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಸೌಲಭ್ಯಗಳನ್ನು ಮಾರ್ಗಸೂಚಿಗಳನ್ವಯ ನೀಡಲಾಗುವುದು.
- ಸುವರ್ಣ ಆರೋಗ್ಯ ಸುರಕ್ಷ ಟ್ರಸ್ಟ್ ವತಿಯಿಂದ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿಯಲ್ಲಿ ಸರ್ಕಾರಿ ಹಾಗೂ ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸಾ ಸೇವೆಗಳು.
- ಸರ್ಕಾರಿ ನೌಕರರಿಗೆ ಹಾಗೂ ಅವಲಂಬಿತರಿಗೆ **ಜ್ಯೋತಿ ಸಂಜೀವಿನಿ** ಯೋಜನೆ ಆರ್ಥಿಕ ಮಿತಿ ಇಲ್ಲದೇ ವೈದ್ಯಕೀಯ ಸೇವೆ.

- **ಇತರೆ ಸೇವೆಗಳು:-**

**104-ಆರೋಗ್ಯ ಸಹಾಯವಾಣಿ;-** ಆರೋಗ್ಯ ಚಿಕಿತ್ಸೆಗಾಗಿ ಸಕಾಲದಲ್ಲಿ ಆಸ್ಪತ್ರೆಗಳನ್ನು ತಲುಪಲು ಸಾಧ್ಯವಾಗದ ಗ್ರಾಮೀಣ ಜನರು ದೂರವಾಣಿ ಮುಖಾಂತರ ತಜ್ಞ ವೈದ್ಯರ ಸಲಹೆ ಪಡೆಯಲು 104-ಆರೋಗ್ಯ ಸಹಾಯವಾಣಿ ಯೋಜನೆ ನೇರವಾಗುತ್ತಿದೆ.

**ಆರೋಗ್ಯ ಕವಚ (ತುರ್ತು ಅಂಬ್ಯುಲೆನ್ಸ್ 108);-** ಉಚಿತ 108 ಫೋನ್ ಕರೆಯ ಮೂಲಕ ವೈದ್ಯಕೀಯ, ಪೋಲೀಸ್, ಬೆಂಕಿ ಮತ್ತು ರಸ್ತೆ ಅಪಘಾತ ಪ್ರಕರಣಗಳಿಗೆ ತುರ್ತು ವೈದ್ಯಕೀಯ ಸೇವೆ ಒದಗಿಸುವ ಉದ್ದೇಶವಾಗಿರುತ್ತದೆ.

ಮುಂದುವರೆದು, ಇದಲ್ಲದೇ ಇ-ಆಸ್ಪತ್ರೆ, ಇ-ಮಾನಸ (ಕರ್ನಾಟಕ ಮಾನಸಿಕ ಆರೋಗ್ಯ ನಿರ್ವಹಣಾ ವ್ಯವಸ್ಥೆ) ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

17.3.22

ಆಯುಕ್ತರು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

## ಪ್ರಶ್ನೆ ಸಂಖ್ಯೆ 2327 ಕ್ಕೆ ಅನುಬಂಧ-1

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ನಿಂದ ಅನುಷ್ಠಾನಗೊಳಿಸಲಾಗುತ್ತಿರುವ ಆರೋಗ್ಯ ಯೋಜನೆಗಳ ವಿವರ ಈ ಕೆಳಗಿನಂತಿವೆ.

- ರಾಜ್ಯದಲ್ಲಿ ಆಯುಷ್ಮಾನ್ ಭಾರತ್ - ಆರೋಗ್ಯ ಕರ್ನಾಟಕ ಯೋಜನೆ ದಿನಾಂಕ 30.10.2018ರಿಂದ ಜಾರಿಯಲ್ಲಿರುತ್ತದೆ. ಈ ಸಂಯೋಜಿತ ಯೋಜನೆಯ ಅನುಷ್ಠಾನದ ಕುರಿತು ಸರ್ಕಾರದ ಆದೇಶ ಸಂಖ್ಯೆ: ಹೆಚ್.ಎಫ್.ಡಬ್ಲ್ಯೂ/69ಸಿಜಿಇ/2018,ದಿ:15.11.2018ರಂದು ಹೊರಡಿಸಲಾಗಿದೆ.

  ಈ ಯೋಜನೆಯಡಿ ಬಿ.ಪಿ.ಎಲ್ ಕಾರ್ಡುದಾರರಿಗೆ ಉಚಿತ ಚಿಕಿತ್ಸೆ ಮತ್ತು ಎ.ಪಿ.ಎಲ್. ಕಾರ್ಡುದಾರರಿಗೆ ಸಹಪಾವತಿಯ ಆಧಾರದ ಮೇಲೆ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ ಹಾಗೂ ಯೋಜನೆಯಡಿ ಸಾಮಾನ್ಯ ದ್ವಿತೀಯ ಹಂತದ 291 ಚಿಕಿತ್ಸಾ ವಿಧಾನಗಳು, ಕ್ಲಿಷ್ಟಕರ ದ್ವಿತೀಯ ಹಂತದ 254 ಚಿಕಿತ್ಸಾ ವಿಧಾನಗಳು, ತೃತೀಯ ಹಂತದ 900 ಚಿಕಿತ್ಸಾ ವಿಧಾನಗಳು 169 ತುರ್ತು ಚಿಕಿತ್ಸೆಗಳು ಹಾಗೂ 36 ಉಪ ಚಿಕಿತ್ಸಾ ವಿಧಾನಗಳು ಸೇರಿದಂತೆ ಒಟ್ಟು 1650 ಚಿಕಿತ್ಸೆಗಳನ್ನು ಒದಗಿಸಲಾಗುತ್ತಿದೆ. 561 ಖಾಸಗಿ ಆಸ್ಪತ್ರೆಗಳು ಹಾಗೂ 2909 ಸರ್ಕಾರಿಆಸ್ಪತ್ರೆಗಳು ಒಟ್ಟು 3470 ಆಸ್ಪತ್ರೆಗಳು ಈ ಯೋಜನೆಯಡಿ ನೊಂದಾವಣೆಯಾಗಿರುತ್ತದೆ.

- ಅಂಗಾಂಗಕಸಿ ಯೋಜನೆಯನೆಯನ್ನು ಸರ್ಕಾರದ ಆದೇಶ ಸಂಖ್ಯೆ: ಹೆಚ್.ಎಫ್.ಡಬ್ಲ್ಯೂ/64ಪಿಎಫ್‌ಪಿ/2018, ದಿನಾಂಕ:03.12.2018ರಿಂದ ಬಿ.ಪಿ.ಎಲ್ ಫಲಾನುಭವಿಗಳಿಗೆ ಉಚಿತವಾಗಿ ಹೃದಯ ಕಸಿ, ಕಿಡ್ನಿ ಕಸಿ ಮತ್ತು ಲಿವರ್ ಅಂಗಾಂಗ ಕಸಿ ಚಿಕಿತ್ಸೆಯನ್ನು ಉಚಿತವಾಗಿ ಒದಗಿಸಲಾಗುತ್ತಿದೆ.

  ಈ ಯೋಜನೆಯಡಿ 11 ಖಾಸಗಿ ಆಸ್ಪತ್ರೆಗಳು ಹಾಗೂ 02 ಸರ್ಕಾರಿ ಆಸ್ಪತ್ರೆಗಳು ನೊಂದಾವಣೆಯಾಗಿರುತ್ತವೆ.

- ಸರ್ಕಾರಿ ಆದೇಶ ಸಂಖ್ಯೆ:ಆಕುಕ 38 ಎಫ್.ಪಿ.ಇ 2019 ದಿನಾಂಕ:08.11.2019 ಮತ್ತು 24.01.2020ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 08 ತಿಂಗಳಿಂದ 06 ವರ್ಷಗಳೊಳಗಿನ ಮಕ್ಕಳಿಗಾಗಿ ಉಚಿತ ಕಾಕ್ಲಿಯರ್ ಇಂಪ್ಲಾಂಟ್ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಇದು ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರ ಚಿಕಿತ್ಸೆ ಮತ್ತು ಒಂದು ವರ್ಷದವರೆಗೆ ಆಡಿಯೋ ವರ್ಬಲ್ ಥೆರಪಿಯನ್ನು(ಎ.ವಿ ಥೆರಪಿ)ಒಳಗೊಂಡಿರುತ್ತದೆ.ಈ ಯೋಜನೆಯಡಿ 2 ಸರ್ಕಾರಿ ಆಸ್ಪತ್ರೆಗಳು ನೊಂದಾವಣೆಯಾಗಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ:ಆಕುಕ 122 ಸಿಜಿಇ 2021, ದಿನಾಂಕ:15.09.2021ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೋಗಿಗಳಿಗೆ ಗಂಭೀರ ಸ್ವರೂಪದ ಮತ್ತು ಅಧಿಕ ವೈದ್ಯಕೀಯ ವೆಚ್ಚದ ಖಾಯಿಲೆಗಳಿಗೆ ಚಿಕಿತ್ಸೆ ಒದಗಿಸಲು ಆದೇಶ ಹೊರಡಿಸಲಾಗಿದೆ ಹಾಗೂ ಅನುಷ್ಠಾನದ ಹಂತದಲ್ಲಿರುತ್ತದೆ.

17.3.22

ಆಯುಕ್ತರು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2327 ಕ್ಕೆ ಅನುಬಂಧ-2

1) ಕೋವಿಡ್-19ರ ಸಮರ್ಪಕ ನಿರ್ವಹಣೆಗಾಗಿ ಕೋವಿಡ್-1 ಮತ್ತು 2ನೇ ಅಲೆಯ ಸಂದರ್ಭದಲ್ಲಿ ಈ ಕೆಳಕಂಡ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

| ಆಸ್ಪತ್ರೆಯ ಹೆಸರು ಮತ್ತು ಸಂಖ್ಯೆ | ಮೆಡಿಕಲ್ ಆಕ್ಸಿಜನ್ ಗ್ಯಾಸ್ ಪೈಪ್‌ಲೈನ್ ಅಳವಡಿಸಿರುವ ಬೆಡ್‌ಗಳ ಸಂಖ್ಯೆ | ಎಲ್‌ಎಂಓ ,ಟ್ಯಾಂಕ್ ಅಳವಡಿಸಿರುವ ಆಸ್ಪತ್ರೆಗಳ ಸಂಖ್ಯೆ | ಒಟ್ಟು ಅಂದಾಜು ಮೊತ್ತ |
|---|---|---|---|
| 1 | 2 | 3 | 4 |
| 19 ಜಿಲ್ಲಾ ಆಸ್ಪತ್ರೆಗಳು | 1896 ಬೆಡ್‌ಗಳು | 13 ಸಂಖ್ಯೆ | ರೂ.222 ಕೋಟಿಗಳು |
| 146 ತಾಲ್ಲೂಕು ಆಸ್ಪತ್ರೆಗಳು | 7005 ಬೆಡ್‌ಗಳು | 11 ಸಂಖ್ಯೆ | |
| 203 ಸಮುದಾಯ ಆರೋಗ್ಯ ಕೇಂದ್ರಗಳು | 6050 ಬೆಡ್‌ಗಳು | | |
| ಬೆಂಗಳೂರಿನಲ್ಲಿನ ಲಪ್ರಸಿ ಆಸ್ಪತ್ರೆ, ಇಡಿ ಆಸ್ಪತ್ರೆ, ಕೆ.ಸಿ. ಜನರಲ್ ಆಸ್ಪತ್ರೆಗಳು | 170 ಬೆಡ್‌ಗಳು | – | |
| **ಒಟ್ಟು** | **15121 ಬೆಡ್‌ಗಳು** | 24 ಸಂಖ್ಯೆ | **ರೂ.222 ಕೋಟಿಗಳು** |

2) ಕೋವಿಡ್-19ರ 3ನೇ ಅಲೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ನಿಭಾಯಿಸಲು ಈ ಕೆಳಕಂಡ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

| ಆಸ್ಪತ್ರೆಯ ಹೆಸರು ಮತ್ತು ಸಂಖ್ಯೆ | ಮೆಡಿಕಲ್ ಆಕ್ಸಿಜನ್ ಗ್ಯಾಸ್ ಪೈಪ್‌ಲೈನ್ ಅಳವಡಿಸಿರುವ ಬೆಡ್‌ಗಳ ಸಂಖ್ಯೆ | ಐಸಿಯು/ಪಿಐಸಿಯು/ ಹೆಚ್‌ಡಿಯು ಗಳಾಗಿ ಪರಿವರ್ತಿಸಿರುವ ಬೆಡ್‌ಗಳ ಸಂಖ್ಯೆ | ಒಟ್ಟು ಅಂದಾಜು ಮೊತ್ತ |
|---|---|---|---|
| 1 | 2 | 3 | 4 |
| 19 ಜಿಲ್ಲಾ ಆಸ್ಪತ್ರೆಗಳು | 665 ಬೆಡ್‌ಗಳು | 263 ಬೆಡ್‌ಗಳು | ರೂ.268 ಕೋಟಿಗಳು |
| 146 ತಾಲ್ಲೂಕು ಆಸ್ಪತ್ರೆಗಳು | 6386 ಬೆಡ್‌ಗಳು | 2928 ಬೆಡ್‌ಗಳು | |
| **ಒಟ್ಟು** | **7051 ಬೆಡ್‌ಗಳು** | **3191 ಬೆಡ್‌ಗಳು** | **ರೂ.268 ಕೋಟಿಗಳು** |

3) 2021-22ನೇ ಸಾಲಿನ ಅಮೃತ ಆರೋಗ್ಯ ಮೂಲ ಸೌಲಭ್ಯ ಉನ್ನತೀಕರಣ ಯೋಜನೆಯಡಿಯಲ್ಲಿ 750 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಸೌಲಭ್ಯ ಉನ್ನತೀಕರಣ ಕಾಮಗಾರಿಗಳನ್ನು ರೂ.150.00 ಕೋಟಿಗಳ ಮೊತ್ತದಲ್ಲಿ ಕೈಗೊಳ್ಳಲಾಗುತ್ತಿದ್ದು, ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಈ ಯೋಜನೆಯಲ್ಲಿ ಪ್ರತಿ ಜಿಲ್ಲೆಗೆ 25 ಪ್ರಾಥಮಿಕ ಆರೋಗ್ಯ ಕೇಂದ್ರಗಳಂತೆ ಪ್ರತಿ ಘಟಕಕ್ಕೆ ರೂ.20 ಲಕ್ಷಗಳ ಮೊತ್ತದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ.

4) 2021-22ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳಡಿಯಲ್ಲಿ ಆಸ್ಪತ್ರೆಗಳ ನಿರ್ಮಾಣ/ಉನ್ನತೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಇವುಗಳಲ್ಲಿ ಜಿಲ್ಲಾ/ತಾಲ್ಲೂಕು/ಎಂಸಿಹೆಚ್ /ಸಮುದಾಯ ಆರೋಗ್ಯ ಕೇಂದ್ರಗಳು/ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣ ಕಾಮಗಾರಿಗಳು ಸೇರಿದ್ದು, ವಿವರಗಳು ಈ ಕೆಳಕಂಡಂತಿವೆ.

PTO

| ಕ್ರಸಂ | ಲೆಕ್ಕ ಶೀರ್ಷಿಕೆ | ಒಟ್ಟು ಕಾಮಗಾರಿಗಳ ಸಂಖ್ಯೆ | ಕಾಮಗಾರಿಗಳ ಒಟ್ಟು ಮೊತ್ತ (ರೂ. ಕೋಟಿಗಳಲ್ಲಿ) |
|---|---|---|---|
| 1 | 4210-01-110-1-01-386 (ಪ್ರಧಾನ ಕಾಮಗಾರಿಗಳು) | 146 | 745.53 |
| 2 | 4210-01-110-1-01-133 (ಎಸ್.ಡಿ.ಪಿ) | 163 | 289.86 |
| 3 | 4210-01-110-1-01-422 (ಎಸ್.ಸಿ.ಎಸ್.ಪಿ) | 18 | 28.08 |
| 4 | 4210-01-110-1-01-423 (ಟಿ.ಎಸ್.ಪಿ) | 11 | 28.39 |
| 5 | ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆ | 48 | 528.73 |
| | ಒಟ್ಟು | 386 | 1620.59 |

ಒಟ್ಟಾರೆಯಾಗಿ ಈ ಕೆಳಕಂಡ ಮೊತ್ತದ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

| ಕ್ರಸಂ | ಕಾಮಗಾರಿಯ ವಿವರ | ಕಾಮಗಾರಿಯ ಸಂಖ್ಯೆ | ಕಾಮಗಾರಿಯ ಅಂದಾಜು ಮೊತ್ತ |
|---|---|---|---|
| 1 | ಕೋವಿಡ್-1 ಮತ್ತು 2ನೇ ಅಲೆಯ ಕಾಮಗಾರಿಗಳು | • 15121 ಆಕ್ಸಿಜನ್ ಬೆಡ್‌ಗಳು<br>• 24 ಸಂಖ್ಯೆ ಎಲ್‌ಎಂಓ ಟ್ಯಾಂಕ್‌ಗಳು | ರೂ.222 ಕೋಟಿಗಳು |
| 2 | ಕೋವಿಡ್-3ನೇ ಅಲೆಯ ಕಾಮಗಾರಿಗಳು | • 7051 ಆಕ್ಸಿಜನ್ ಬೆಡ್‌ಗಳು<br>• 3191 ಐಸಿಯು ಬೆಡ್‌ಗಳು | ರೂ.268 ಕೋಟಿಗಳು |
| 3 | ಅಮೃತ ಆರೋಗ್ಯ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಸೌಲಭ್ಯ ಅಭಿವೃದ್ಧಿ ಕಾಮಗಾರಿಗಳು | 750 ಆರೋಗ್ಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು | ರೂ.150 ಕೋಟಿಗಳು |
| 4 | ಆಸ್ಪತ್ರೆಗಳ ನಿರ್ಮಾಣ/ಉನ್ನತೀಕರಣ | 386 | ರೂ.1620.59ಕೋಟಿಗಳು |
| | ಒಟ್ಟು | 25363 ಬೆಡ್‌ಗಳು,<br>24 ಎಲ್‌ಎಂಓ ಟ್ಯಾಂಕ್‌ಗಳು,<br>1136 ಕಾಮಗಾರಿಗಳು | ರೂ.2260.59 ಕೋಟಿಗಳು |

- ರಾಜ್ಯ ಸರ್ಕಾರದಿಂದ ಕೋವಿಡ್-19 2ನೇ ಅಲೆಯಲ್ಲಿ 40 ಸಂಖ್ಯೆಯ ಆಕ್ಸಿಜನ್ ಜನರೇಟರ್ ಪ್ಲಾಂಟ್‌ಗಳನ್ನು ರೂ.37.73 ಕೋಟಿಗಳ ಮೊತ್ತದಲ್ಲಿ ಅನುಷ್ಠಾನಗೊಳಿಸಲಾಗಿದೆ.
- ರಾಜ್ಯದಲ್ಲಿ ಪ್ರಸ್ತುತ 32 ಲಿಕ್ವಿಡ್ ಮೆಡಿಕಲ್ ಆಕ್ಸಿಜನ್ ಟ್ಯಾಂಕ್‌ಗಳು ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಅಳವಡಿಸಲಾಗಿದೆ.
- 246 ಪಿಎಸ್‌ಎ ಆಕ್ಸಿಜನ್ ಜನರೇಷನ್ ಪ್ಲಾಂಟ್‌ಗಳನ್ನು ಅಳವಡಿಸಲಾಗಿದೆ.
- 15139 ಆಕ್ಸಿಜನ್ ಸಿಲಿಂಡರ್‌ಗಳು ಹಾಗೂ 9000 ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ಅಳವಡಿಸಲಾಗಿದೆ.
- ಸದರಿ ಆಕ್ಸಿಜನ್ ಉತ್ಪಾದಕ ಮತ್ತು ಶೇಖರಣಾ ಯಂತ್ರಗಳ ಅಳವಡಿಕೆಯಿಂದ 1091 ಮೆಟ್ರಿಕ್ ಟನ್‌ಗಳಷ್ಟು ಆಕ್ಸಿಜನ್ ಲಭ್ಯವಿರುತ್ತದೆ.

ಇದಲ್ಲದೆ 2021-22ನೇ ಸಾಲಿನಲ್ಲಿ ಪ್ರಾಥಮಿಕ ಆರೋಗ್ಯ ಸೌಲಭ್ಯಗಳನ್ನು ಬಲಪಡಿಸಲು 15ನೇ ಹಣಕಾಸು ಆಯೋಗದ ಅನುದಾನ ಲೆಕ್ಕಶೀರ್ಷಿಕೆ 2210-06-800-0-04 ಅಡಿಯಲ್ಲಿ ರಾಜ್ಯಕ್ಕೆ ರೂ.552 ಕೋಟಿ ಅನುದಾನ ಲಭ್ಯವಿದ್ದು ಈ ಅನುದಾನದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಪ್ರಯೋಗ ಶಾಲೆಗಳ ಬಲವರ್ಧನೆಗೆ ಕ್ರಮಕೈಗೊಳ್ಳಲಾಗುತ್ತಿದೆ.

17.3.22

ಆಯುಕ್ತರು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.

ಅನುಬಂಧ-3

ಅಂಗಾಂಗಕಸಿ ಯೋಜನೆಯಡಿ ನೋಂದಾವಣೆಯಾಗಿರುವ ಆಸ್ಪತ್ರೆಗಳ ವಿವರ

| ಕ್ರಮ ಸಂಖ್ಯೆ | ಆಸ್ಪತ್ರೆಯ ಹೆಸರು | ಜಿಲ್ಲೆ | ಅಂಗಾಂಗದ ವಿಧ | ಸರ್ಕಾರಿ/ಖಾಸಗಿ |
|---|---|---|---|---|
| 1 | Institute of Nephro Urology | Bangalore | Kidney | Govt |
| 2 | SJICR | Bangalore | Heart | Govt |
| 3 | Naryana Hrudayalaya Pvt Ltd | Bangalore | Heart,Kidney,Liver | Private |
| 4 | Aster CMI | Bangalore | Liver | Private |
| 5 | MS Ramaiah Narayana Heart Centre | Bangalore | Heart | Private |
| 6 | MS Ramaiah Hospital | Bangalore | Kidney | Private |
| 7 | KLES Dr Prabhakar Kore Hospital and MRC | Belgaum | Kidney, Heart | Private |
| 8 | Yenepoya Medical College Hospital | Dakshina Kannada | Kidney | Private |
| 9 | Justice KS Hegde Hospital | Dakshina Kannada | Kidney | Private |
| 10 | Tatwadarsha Hospital | Hubli | Kidney | Private |
| 11 | Chirayu Hospital | Kalaburgi | Kidney | Private |
| 12 | Apollo BGS Hospital | Mysore | Kidney,Liver | Private |
| 13 | Sigma Hospital | Mysore | Kidney | Private |

17.3.22

ಆಯುಕ್ತರು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.